**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ: 1040/2021** **CW-7** **PW-7**

**ಸಾಕ್ಷಿಯನ್ನು ದಿಃ 18.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಡಾ. ಚಿದಾನಂದ |
| ತಂದೆಯ ಹೆಸರುಃ | ವೆಂಕಟೇಶ |
| ವಯಸ್ಸುಃ | 42 ವರ್ಷ |
| ವೃತ್ತಿಃ | ವೈದ್ಯಾಧಿಕಾರಿ, ಚನ್ನರಾಯಪಟ್ಟಣದ ಸರ್ಕಾರಿ ಆಸ್ಪತ್ರೆ |
| ವಾಸ ಸ್ಥಳಃ | ಚನ್ನರಾಯಪಟ್ಟಣ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ಚನ್ನರಾಯಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ದಿಃ 12.07.2019 ರಿಂದ ಇಲ್ಲಿಯವರೆಗೆ ಹಿರಿಯ ತಜ್ಞರಾಗಿ ಕೆಲಸ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 25.03.2021 ರಂದು ಬೆಳಗ್ಗೆ 8.20 ರ ಸಮಯದಲ್ಲಿ ಚಾಸಾ-1, ರವರನ್ನು ಅವರ ಸಹೋದರ ಗೋಪಾಲಕೃಷ್ಣ ರವರು ಹಲ್ಲೆಯ ಹಿನ್ನೆಲೆಯಲ್ಲಿ ಗಾಯಗೊಂಡು ಚಿಕಿತ್ಸೆ ಪಡೆದುಕೊಳ್ಳಲು ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ಸದರಿಯವರನ್ನು ಪರೀಕ್ಷಿಸಿದಾಗ ತಲೆಯ ಬಲ ಭಾಗದಲ್ಲಿ 3 X 1 ಸಿ ಎಂ ಅಳತೆಯ ತೆರೆದ ಗಾಯ ಎದೆಯ ಭಾಗದಲ್ಲಿ ಮುಟ್ಟಿದರೆ ನೋವುಂಟಾಗುವ ಗಾಯವಾಗಿದ್ದು ಸದರಿ ಗಾಯಗಳನ್ನು ನನ್ನ ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುತ್ತೇನೆ. ನನ್ನ ಅಭಿಪ್ರಾಯದಲ್ಲಿ ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದವು.

ಸಾಕ್ಷಿಗೆ ಗಾಯದ ಪ್ರಮಾಣ ಪತ್ರವನ್ನು ತೋರಿಸಲಾಗಿ, ಅದನ್ನು ಅವರು ನೋಡಿ ಗುರುತಿಸಿದ್ದು, ಅದನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

ಗಾಯ–1 ಕಬ್ಬಿಣದ ರಾಡಿನಿಂದ ಹೊಡೆದಾಗ ಆಗುವ ಸಾಧ್ಯತೆ ಇರುತ್ತದೆ.

ಗಾಯ–2 ಕೈಯಿಂದ ಅಥವಾ ಕಾಲಿನಿಂದ ಒದ್ದಾಗ ಆಗುವ ಸಾಧ್ಯತೆ ಇರುತ್ತದೆ.

**ಪಾಟೀ ಸವಾಲುಃ – ಆರೋಪಿ ಪರ ಶ್ರೀ ಕೆ ಎನ್ ಎಸ್ ವಕೀಲರಿಂದ**

ಚಾಸಾ–1 ರವರ ತಂದೆಯ ಹೆಸರು ನಮೂದು ಇಲ್ಲ. ಗಾಯದ ಪ್ರಮಾಣ ಪತ್ರದಲ್ಲಿ ಯಾರಿಂದ ಯಾವ ಕಾರಣಕ್ಕೆ ಎಂಬುದನ್ನು ಬರೆದಿಲ್ಲ ಎಂದರೆ ಸರಿ. ಗಾಯದ ಪ್ರಮಾಣ ಪತ್ರದಲ್ಲಿ ನಾನು ಚಿಕಿತ್ಸೆ ನೀಡಿದ ಸಮಯ ಬೆಳಗ್ಗೆ 7.40 ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಕಣ್ಣುತಪ್ಪಿನಿಂದ ಬೆಳಗ್ಗೆ 8.20 ರ ಬದಲು ನಮೂದಾಗಿದೆ ಎನ್ನುತ್ತಾರೆ. ಸಿ ಕೆ ಗೋಪಾಲಕೃಷ್ಣ ರವರ ಪ್ರಭಾವಕ್ಕೆ ಒಳಗಾಗಿ ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ. ನಿಪಿ–6 ರಲ್ಲಿರುವ 1ನೇ ಗಾಯ ನೆಲದ ಮೇಲೆ ಬಿದ್ದಾಗಲು ಆಗುವ ಸಾಧ್ಯತೆ ಇದೆ ಎಂದರೆ ಸರಿ. 2ನೇ ಗಾಯವು ಮೇಲ್ನೋಟಕ್ಕೆ ಕಾಣುವುದಿಲ್ಲ ಎಂದರೆ ಸರಿ. ನಿಪಿ–6 ರಲ್ಲಿ ನಮೂದಿಸಿರುವ ಚಾಸಾ–1 ರವರಿಗೆ ಯಾವುದೇ ಗಾಯ ಆಗಿರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ .)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**